ದಿ: ೧೩.೧೨.೨೦೨೨ ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿ ಪಾಟೀ ಸವಾಲಿಗೆ ಒಳಪಡಿಸಲಾಯಿತು.

**ಪಾಟೀ ಸವಾಲು**: ೧ ಮತ್ತು ೨ನೇ ಪ್ರತಿವಾದಿ ಪರ ಶ್ರೀ ಹೆಚ್.ಆರ್. ವಕೀಲರಿಂದ,

ನಾನು ಹಾಜರುಪಡಿಸಿರುವ ದಾಖಲೆಗಳ ಕುರಿತು ನನಗೆ ಮಾಹಿತಿ ಇದೆ. ದಾವಾ ಆಸ್ತಿ ನಂ.೭೮ ಇರುತ್ತದೆ. ದಾವಾ ಆಸ್ತಿಯಲ್ಲಿ ನಾನು ಮೊದಲು ವಾಸಿಸುತ್ತಿದ್ದೇ, ಈಗ ಐದು ವರ್ಷದ ಹಿಂದೆ ಖಾಲಿ ಮಾಡಿದ್ದೇನೆ. ದಾವಾ ಆಸ್ತಿಯಲ್ಲಿ ನಾವು ಕಟ್ಟಿದ ಒಂದು ಮನೆ ಇದೆ. ನಾನು ಮೇಲೆ ಹೇಳಿದ ನಂಬರಿಗೆ ದಾವೆ ಸಲ್ಲಿಸಿಲ್ಲ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ದಾವಾ ಆಸ್ತಿಯ ವಿಸ್ತೀರ್ಣ ಪೂಪ-೩೪ , ಉದ-೯೪ ಅಡಿ ಇರುತ್ತದೆ. ದಾವಾ ಆಸ್ತಿಯ ಪೂ-ಮೊಹಮುದ್ ಸ್ವಾಮಿ ಜಮೀನು, ಪ-ಮೊದಲು ವೆಂಕಟಪ್ಪ ಇದ್ದರು ಈಗ ಗೋಪಾಲಪ್ಪನವರ ಆಸ್ತಿ, ಉ-ಕುಂಟೆ, ದ-ಸರ್ಕಾರಿ ಶಾಲೆ ಮೊದಲು ಸರ್ಕಾರಿ ಮೈದಾನ ಇತ್ತು. ನಿಪಿ.೮ರ ಭಾವಚಿತ್ರದಲ್ಲಿ ಇರುವವರು ಪ್ರತಿವಾದಿಯರು ಸಾಕ್ಷಿಯು ಮುಂದುವರೆದು ತಾನು ಮನೆ ಬಿಟ್ಟು ಹೋದ ಮೇಲೆ ಅವರು ಬಂದು ಒತ್ತಾಯ ಪೂರಕವಾಗಿ ನೆಲೆಸಿದ್ದಾರೆ ಎನ್ನುತ್ತಾರೆ. ಪ್ರತಿವಾದಿಯರು ಸದರಿ ಮನೆಯಲ್ಲಿ ಸುಮಾರು ೪-೫ ವರ್ಷಗಳಿಂದ ಇದ್ದಾರೆ. ಸದರಿ ಮನೆ ಕಟ್ಟಿ ೬ ವರ್ಷ ಆಯಿತು. ಅದು ಬಿದ್ದು ಹೋಗಿತ್ತು, ಅದನ್ನು ಪ್ರತಿವಾದಿಯರು ೩ ವರ್ಷದ ಹಿಂದೆ ಸರಿಪಡಿಸಿಕೊಂಡಿದ್ದಾರೆ.

ನಿಪಿ.೬ ಮತ್ತು ೭ ದಾಖಲೆ ಸರಿ ಇದೆಯೋ ಇಲ್ಲವೋ ನಮ್ಮ ವಕೀಲರಿಗೆ ಗೊತ್ತು. ನಾನು ದಾವೆ ಸಲ್ಲಿಸಿರುವ ಆಸ್ತಿಯಲ್ಲಿ ಪ್ರತಿವಾದಿಯರು ಸುಮಾರು ವರ್ಷಗಳಿಂದ ಮನೆ ಕಟ್ಟಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಪ್ರತಿವಾದಿಯರು ಸದರಿ ಮನೆಯನ್ನು ಬಾಡಿಗೆಗೆ ಕೊಡುವಂತೆ ತನ್ನನ್ನು ಕೇಳಿದ್ದು, ತಾನು ಇಲ್ಲ ಎಂದಿದ್ದಕ್ಕೆ ಪ್ರತಿವಾದಿಯರು ಒತ್ತಾಯ ಪೂರಕವಾಗಿ ಮನೆಯನ್ನು ಪಡೆದುಕೊಂಡಿದ್ದಾರೆ ಎನ್ನುತ್ತಾರೆ. ನಿಪಿ.೧ ರಿಂದ ೩ ರಸೀದಿಗಳು ದಾವಾ ಆಸ್ತಿಗೆ ಮತ್ತು ನಾನು ಹೇಳಿದ ಆಸ್ತಿಗೆ ಸಂಬಂಧಿಸಿದಲ್ಲ ಎಂದರೆ ಸರಿಯಲ್ಲ. ನಿಪಿ.೪ ಮತ್ತು ೫ ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡಿದ್ದು, ದಾವೆ ಸಲ್ಲಿಸಿದ ವರ್ಷಕ್ಕೆ ಸಂಬಂಧಿಸಿದಲ್ಲ ಎಂದರೆ ಸರಿಯಲ್ಲ. ಈಗ ನಾನು ಹಾಜರುಪಡಿಸಿದ ದಾಖಲೆಗಳನ್ನು ಹೊರತುಪಡಿಸಿ, ಬೇರೆ ಯಾವುದೇ ದಾಖಲೆಗಳು ಇಲ್ಲ.

ಪ್ರತಿವಾದಿಯರು ೨೦೧೭ ರಲ್ಲಿ ನನಗೆ ಯಾವುದೇ ತೊಂದರೆ ನೀಡಿಲ್ಲ, ಆದರೆ ನಾನು ಆ ಮನೆಗೆ ಹೋದರೆ ತೊಂದರೆ ನೀಡುತ್ತಾರೆ. ಸದರಿ ಚಕ್ಕುಬಂದಿಯಲ್ಲಿರುವ ಆಸ್ತಿ ಪ್ರತಿವಾದಿಯರಿಗೆ ಸೇರಿದ್ದು, ನಾನು ಸುಳ್ಳು ದಾಖಲೆಗಳನ್ನು ಸೃಷ್ಟಿಸಿ, ಸುಳ್ಳು ಪ್ರಕರಣವನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯರ ಮನೆ ನಂ. ಕ್ರಮ ಸಂಖ್ಯೆ ೧೧೨ ಜುಂಜರ್ ನಂ.೨೫ , ಆಸ್ತಿ ನಂ.೩ಬಿ ಎಂದರೆ ನನಗೆ ಗೊತ್ತಿಲ್ಲ. ಅದರಿ ವಿಸ್ತೀರ್ಣ ೨೭*೫೫ ಅಡಿ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಯರು ವಾಸವಿರುವ ಮನೆಯ ಪೂ- ಮೊಹಮದ್ ಸಾಬಿ, ಪ- ಮೊದಲು ಈರಪ್ಪನವರ ವೆಂಕಟಪ್ಪ ಇದ್ದರು, ಈಗ ಗೋಪಾಲಪ್ಪ ಇದ್ದಾರೆ , ಉ- ಕುಂಟೆ ಈಗ ರಸ್ತೆ ಇದೆ, ದಕ್ಷಿಣಕ್ಕೆ ಮೊದಲು ಸರ್ಕಾರಿ ಜಾಗೆ ಇದ್ದು, ಈಗ ಶಾಲೆ ಕಟ್ಟಿದ್ದಾರೆ ಎಂದರೆ ಸರಿ.

ದಾವಾ ಆಸ್ತಿಯ ದಾಖಲೆಗಳು ಪ್ರತಿವಾದಿಯರ ಹೆಸರಿನಲ್ಲಿದೆ ಎಂದರೆ ಸರಿಯಲ್ಲ.

( ಈ ಹಂತದಲ್ಲಿ ಇನೇ ಪ್ರತಿವಾದಿ ಪರವಾಗಿ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

**ಓ.ಹೇ.ಕೇ.ಸ.ಇದೆ**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ**
**ಹೊಸಕೋಟೆ.**